

ಈ ನಿಟ್ಟಿನಲ್ಲಿ ಗಾಂಧಿ ಮತ್ತು ನೆಹರೂರವರ ನಡುವಿನ ಮಧ್ಯಮಾರ್ಗವನ್ನು ಕಂಡುಕೊಂಡವರು ಬಹಳ ಕಡಿಮೆ. ನಾಯಕರು ಮಾತ್ರವಲ್ಲ, ನಾವೆಲ್ಲರೂ ಈಗಲೂ ಈ ದ್ವಂದ್ವವನ್ನು ಎದುರಿಸುತ್ತಾ ಛಿದ್ರವಾದ ಸಮಾಜದ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಅಥವಾ ನಮ್ಮ ನಮ್ಮ ನಂಬಿಕೆಗಳ ಸೆರೆಮನೆಯಲ್ಲಿ ಸಹಜೀವನ ನಡೆಸುತ್ತಿದ್ದೇವೆ. ಸಾಹಿತ್ಯವನ್ನು ಕುರಿತ ನಮ್ಮ ನಿಲುವುಗಳೂ ಈ ಸಂಗತಿಯಿಂದಲೇ ರೂಪಿತವಾಗಿದೆ. ಅದರ ಸಾಮಾಜಿಕ, ತಾತ್ವಿಕ ಮತ್ತು ಕಲಾತ್ಮಕ ಆಯಾಮಗಳನ್ನು ಒಂದು ಹದದಲ್ಲಿ ಬೆರೆಸಲು ನಮಗೆ ಕಷ್ಟವಾಗುತ್ತಿದೆ. ಸಾಹಿತ್ಯಚರಿತ್ರೆಯಿರುವಂತೆಯೇ ಸಾಹಿತ್ಯವಿಮರ್ಶೆಗೂ ಒಂದು ಚರಿತ್ರೆ ಇರುತ್ತದೆ. ಆ ಚರಿತ್ರೆಯಲ್ಲಿ ಪ್ರೊ. ಜಿ.ಎಚ್. ನಾಯಕರಿಗೆ ಒಂದು ಸ್ಥಾನ ಇದ್ದೇ ಇರುತ್ತದೆ. ಯಾವ ವಿಮರ್ಶೆಯನ್ನು ಯಾರು ಎಷ್ಟು ಯಾಕೆ ಓದುತ್ತಾರೆ ಎನ್ನುವುದಕ್ಕೂ ಈ ಸ್ಥಾನನಿರ್ದೇಶನಕ್ಕೂ ವಿಶೇಷ ಸಂಬಂಧವಿಲ್ಲ.

ಇಂತಹ ಚರ್ಚೆಗಳು ಮತ್ತು ಭಿನ್ನಮತಗಳು ಏನೇ ಇರಲಿ, ನಾಯಕರು ನಮಗೆ, ನನಗೆ ನೀಡಿದ್ದು ಅಪಾರ. ಅದು ಪ್ರೀತಿ ಮತ್ತು ತಿಳಿವಳಿಕೆಗಳ ಸಂಯೋಜನೆ. ಅವರ ಬದುಕು ಮತ್ತು ಬರವಣಿಗೆಯಲ್ಲಿ ಹಾಸುಹೊಕ್ಕಾಗಿದ್ದ ಜನಪರತೆ, ಜೀವಪರತೆ ಮತ್ತು ನ್ಯಾಯಪರತೆಗಳಿಂದ ಅವರಿಗೆ ಈ ಸಾಧನೆ ಒದಗಿ ಬಂತು. ಅವರಿಗೆ ನನ್ನ, ನನ್ನ ಕುಟುಂಬದ, ಅವರ ಸಾವಿರಾರು ಅಭಿಮಾನಿಗಳ ಪರವಾಗಿ ನಮಸ್ಕಾರ. 'ಅವರ ಪಾದದ ಧೂಳಿ ನಮ್ಮ ತಲೆ ಮೇಲಿರಲಿ. ಕಣ್ಣೊಳಗೆ ಮಾತ್ರ ಅದು ಬೀಳದಿರಲಿ.' ಇದು ನಾಯಕರ ನಿಲುವೂ ಹೌದು. ನಮ್ಮ ನಿಲುವೂ ಹೌದು. ●